

ರಾಜೀವ ನಾರಾಯಣ ನಾಯಕ





# ಆಮ್ಚಿ ಮುಂಬೈ ಲೋಕಲ್



ಸಾಮಾನ್ಯ ಸಂದರ್ಭಗಳಲ್ಲಿ ಸಮಯವನ್ನು ನಾವು ಗಂಟೆ, ಅರ್ಧಗಂಟೆ, ಕಾಲುಗಂಟೆ ಅಥವಾ ಐದು ಹತ್ತು ನಿಮಿಷಗಳಲ್ಲಿ ಅಳೆಯುತ್ತೇವೆ. ಆದರೆ, ಮುಂಬೈ ಲೋಕಲ್ ಟ್ರೇನುಗಳು ಕಾಲವನ್ನು ನಿಮಿಷ ನಿಮಿಷಗಳಲ್ಲಿ ಕತ್ತರಿಸಿ ಹಾಕುತ್ತವೆ. 7:31, 7:36, 7:43 ಹೀಗೆ ಚಿಲ್ಲರೆ ನಿಮಿಷಗಳ ವೇಳಾಪಟ್ಟಿಯಂತೆ ಓಡಾಡುವ ಟ್ರೇನುಗಳು ಕಾಲದ ವೇಗವನ್ನು ನಮ್ಮ ಪ್ರಜ್ಞೆಯ ಭಾಗವಾಗಿಸುತ್ತವೆ. 7:10 ಕ್ಕೆ ಮನೆ ಬಿಟ್ಟು 7:15 ಕ್ಕೆ ಶೇರ್ ರಿಕ್ಷಾ ಹತ್ತಿ 7:25 ಕ್ಕೆ ಸ್ಟೇಶನ್ ತಲುಪಿ ಬಾಡಿಗೆ